## ಕರಾವಳಿಯ ಕಾವಿ ಕಲೆ

ಕಾವಿ ಕಲೆ ಒಂದು ಪುರಾತನ ವಿಶಿಷ್ಟ ಚಿತ್ರಕಲೆ. ಕಾವಿ ಬಣ್ಣದ ವಿವಿಧ ಛಾಯೆಯುಳ್ಳ ಚಿತ್ರವನ್ನು ಕರ್ನಾಟಕದ ಕರಾವಳಿಗಳ ದೇವಾಲಯ, ಮಠ, ಮಂದಿರಗಳ ಗೋಡೆಯ ಮೇಲೆ ಕಾಣಬಹುದು. ಶಂಖ, ಚಕ್ರ, ಮುದ್ರೆ, ಆನೆ, ನವಿಲುಗಳ ಸಾಲು, ಮಾವಿನೆಲೆಯ ತೋರಣ, ಬೇರೆ ಬೇರೆ ದೇವತೆಗಳ ಚಿತ್ರವನ್ನು ಕಲಾಕಾರರು ಬಿಡಿಸುತ್ತಿದ್ದರು. ಗೋವಾದ ಹೆಚ್ಚಿನ ದೇವಾಲಯಗಳ ಗೋಡೆ, ಕಂಬಗಳಲ್ಲಿ ಕಾವಿ ಕಲೆ ಕಂಗೊಳಿಸುತ್ತದೆ. ಚಿತ್ರದಲ್ಲಿರುವ ಪರಶುರಾಮನ ಕಲಾಕೃತಿ ಗೋವಾದ ದೇವಾಲಯದಲ್ಲಿದೆ. ಶಿರಸಿ ಮಾರಿಕಾಂಬಾ ದೇವಾಲಯ, ಉಡುಪಿಯ ಕಾಣಿಯೂರು ಮಠದಲ್ಲೂ ಬಿಡಿಸಲಾಗಿದೆ. ಮಂಗಳೂರಿನ ಕೊಂಕಣಿ ಕೇಂದ್ರ, ನಳಂದಾ ಶಾಲೆಯಲ್ಲೂ ಕಾವಿ ಚಿತ್ರ ಬಿಡಿಸಿ ಈ ಕಲೆಯ ಪುನರುಜ್ಜೀವನದ ಕಾಯಕ ನಡೆಸಲಾಗಿದೆ.

**-ಲಕ್ಷ್ಮಣ ಶೆಣೈ ಎನ್., ಬಂಟ್ವಾಳ**





## ಕುಂಬಾರ ಗುಂಡಯ್ಯ

ಚಿತ್ರದುರ್ಗದ ಮುರುಘಾಮಠವನ್ನು ಪ್ರವೇಶಿಸಿದ ಕೂಡಲೇ ಆವರಣದಲ್ಲಿ ಕೈಯಲ್ಲಿ ಮಡಕೆ ಹಿಡಿದು ಕುಳಿತ ಕುಂಬಾರ ಗುಂಡಯ್ಯನ ಮೂರ್ತಿ ನಿಮಗೆ ಕಾಣಿಸುತ್ತದೆ. ಆಧುನಿಕ ವಚನ ಸಾಹಿತ್ಯದ ಪುರೋಭಿವೃದ್ಧಿಗೆ ಶ್ರಮಿಸಿದ ಶಿವಶರಣರಲ್ಲಿ ಗುಂಡಯ್ಯನವರೂ ಒಬ್ಬರು. 'ಜಗವನಾಡಿಸುವ ಶಿವನನ್ನೇ ಮಡಕೆಯ ಧ್ವನಿಯಿಂದ ಆಡಿಸಿ ಕುಣಿಸಿದಾತ ಈ ಕುಂಬಾರ ಗುಂಡಯ್ಯ ನೋಡಾ' ಎಂದು ಪ್ರತಿಮೆಯ ಕೆಳಗೆ ಬರೆದ ಸಾಲು ಗುಂಡಯ್ಯನ ಶ್ರೇಷ್ಠತೆಯನ್ನು ಸಾರುತ್ತದೆ. ಇಂತಹ ಅನೇಕ ವಚನಕಾರರ ಜೀವನದ ನಿದರ್ಶನಗಳನ್ನು ತಿಳಿಸುವ ಸಾಕಷ್ಟು ಮಾದರಿಗಳನ್ನು ಅಲ್ಲೇ ಪಕ್ಕದಲ್ಲಿರುವ 'ಮುರುಘಾವನ'ದಲ್ಲಿ ನೋಡಬಹುದು.

**ಚಿತ್ರ- ಬರಹ: ಹನುಮಂತ ಭಟ್ ಬಿ., ಬೆಂಗಳೂರು**

## ಕಳಸದ ತಂಬಿಗೆಗಳು

ಪ್ರತಿಯೊಂದು ಮನೆಯಲ್ಲಿಯೂ ಹಬ್ಬ ಹರಿದಿನಗಳಲ್ಲಿ ಕಳಸ ಇಟ್ಟು ಪೂಜೆ ಮಾಡುವ ಸಂಸ್ಕೃತಿ ಇದೆ. ದೇವರ ಮುಂದೆ, ತುಳಸಿ ಮುಂದೆ ಕಳಸ ಇಟ್ಟು ಪೂಜಿಸುತ್ತಾರೆ. ಕೆಲವರ ಮನೆಯಲ್ಲಿ ಪ್ರತಿನಿತ್ಯ ಹೊಸ್ತಿಲು ಅಥವಾ ಪ್ರಧಾನ ಬಾಗಿಲ ಮುಂದೆ ಸಣ್ಣ ಸಣ್ಣ ಎರಡು ಕಳಸ ಇಟ್ಟಿರುತ್ತಾರೆ. ಹಳೆಯ ಕಾಲದ ಈ ಚಿತ್ತಾರದ ತಂಬಿಗೆಗಳು ಇಂದು ಮಾರುಕಟ್ಟೆಯಲ್ಲಿ ಸಿಗುವುದು ಅಪರೂಪವಾಗಿದೆ.

**-ಲೀಲಾವತಿ ಜಯಶೀಲ, ಬಸಪುರ**

